ಅಕಸ್ಮಾತ್ ನೋಡಿದಂತಿರಬೇಕು; ನಾನಾಗಿಯೇ ಮಾತನಾಡಿಸಿದಂತಿರಬಾರದು. ಅವನಿಗೆ ಹೆಚ್ಚು ಸ್ಕೋಪ್ ಕೊಡಬಾರದೆಂದೂ ಅಂತರಂಗದಲ್ಲೇ ನಿರ್ಧರಿಸಿದೆ. ಮೆಡಿಕಲ್ ಸ್ಟೋರ್‌ನಿಂದ ಬ್ಯಾಗ್ ಹಿಡಿದು ಅವನು ಹೊರಡುವುದನ್ನೇ ಕಾದು ಹಿಂಬಾಲಿಸಿದೆ. ಪರ್ಸ್ ಕೆಡವಿದೆ. ಆ ಶಬ್ದಕ್ಕೆ ಸಹಜವಾಗಿ ತಿರುಗಿದ. ನಾನು ಪರ್ಸ್ ತೆಗೆದುಕೊಳ್ಳಲು ತಡವರಿಸುವಾಗ ಅವನೇ ಬಾಗಿ ಎತ್ತಿಕೊಟ್ಟ. ಕ್ಷಣ ಕಣ್ಣುಗಳು ಸಂಧಿಸಿದವು. ನನ್ನನ್ನು ನೋಡಿದ ಅವನಲ್ಲಿ ವಿಸ್ಮಯ. ಕ್ಷಣಮಾತ್ರದಲ್ಲಿಯೇ ಅವನ ಮೋರೆ ಊರಗಲವಾದುದನ್ನು ಗಮನಿಸುವಾಗ ನನ್ನಲ್ಲಿಯೂ ಮಾತನಾಡಿಸುವ ಧೈರ್ಯ ನರನಾಡಿಗಳಲ್ಲಿ ಚಿಗುರೊಡೆಯಿತು. 'ಅರೆ! ನೀನಾ! ಏನಿಲ್ಲಿ! ಚೆನ್ನಾಗಿದ್ದಿಯಾ?' ತೊದಲ್ನುಡಿದ ಅವನ ಕಣ್ಣುಗಳಲ್ಲಿ ಅದೇ ಮಾಸದ ಮಿಂಚು! ಒಳಗೇ ಪುಳಕಗೊಂಡೆ. ಸೋಲುತ್ತಿದ್ದೇನೇನೋ ಅನ್ನಿಸಿದಾಗ ನನ್ನತನ ಉಳಿಸಿಕೊಳ್ಳುವ ಹಮ್ಮಿನಲ್ಲಿ 'ನೀನಾ...' ಎಂದು ನೀರಸವಾಗಿ ಉದ್ಗರಿಸಿದೆನಾದರೂ ಕಣ್ಣುಗಳು 'ಫಳ್' ಅಂದಿರಬೇಕು. 'ಏನಪ್ಪಾ, ಭಾರಿ ಮೆಡಿಸೆನ್ಸ್ ಪರ್‌ಚೇಸ್ ಮಾಡ್ತಿದ್ದಿಯಾ? ಹುಷಾರಿಲ್ವೆ?' ಆಸ್ಪತ್ರೆಗಳಲ್ಲಿ ಕಾಣುವ ಅಪರಿಚಿತರನ್ನು ವಿಚಾರಿಸುವ ಪರಿ ವಿಚಾರಿಸಿದೆ. 'ನನಗೇನಾಗಿದೆ. ಗುಂಡುಕಲ್ಲಿನ್ಹಾಗಿದ್ದೀನಿ. ನಮ್ಮವರೊಬ್ಬರು ಅಡ್ಮಿಟ್ ಆಗಿದಾರೆ. ಸದ್ಯಕ್ಕೆ ಅವರ ಕೇರ್ ಟೇಕರ್ ನಾನೇ. ನೀನೇನ್ ಇಲ್ಲಿ?' ಕೇಳಿದ. 'ನನ್ನ ಗೆಳತಿಯೊಬ್ಬಳು ಪಾಪ ಅಡ್ಮಿಟ್ ಆಗಿದಾಳೆ ಕಣೋ. ನೋಡ್ಕೊಂಡು ಹೋಗೋಣಾಂತ ಬಂದೆ.' ಇಬ್ಬರಲ್ಲೂ ಸ್ವಲ್ಪ ಹೊತ್ತು ಮೌನ ಕಾಡಿತು. 'ಕೆನಡಾದಿಂದ ಯಾವಾಗ ಬಂದ್ಯೆ?' ಅವನೇ ಮಾತು ಮುಂದುವರೆಸಿದ. 'ಬಂದೇ...' ರಾಗ ಎಳೆದ ನಾನು, 'ಹೇಗಿದ್ದಿಯೋ?' ಅಂದೆ. 'ನೋಡಿದ್ರೆ ಗೊತ್ತಾಗಲ್ವೇನೆ. ಏಕ್‌ಧಂ ಫಸ್ಟ್‌ಕ್ಲಾಸ್' ಅಂದ. 'ಏನು ಫಸ್ಟ್‌ಕ್ಲಾಸೋ ಅಪ್ಪಾ. ಗಡ್ಡ ತೆಗೆಯಲ್ವೇನೋ? ಇನ್ನೂ ಎಷ್ಟು ವರ್ಷ ಭಗ್ನಪ್ರೇಮಿಯ ಡ್ರಾಮಾ ಆಡಬೇಕಂತಿದಿಯೋ ಮಾರಾಯಾ' ಬೇಕೆಂದೇ ಕೀಟಲೆ ಮಾಡಿದೆ.

'ಗಡ್ಡ ಬಿಡೋದು ಡ್ರಾಮಾ ಅಲ್ಲಮ್ಮಾ. ಭಗ್ನ ಪ್ರೇಮಿಗಳ ಐಡೆಂಟಿಟಿ, ಅದು ನಮ್ಮ ಹಕ್ಕು. ಆದರೆ ಗಡ್ಡಬಿಡೋದು ಈಗಿನ ಹುಡುಗರ ಟ್ರೆಂಡು ಕಣೆ' ಅಂದು ನಕ್ಕ. ಐದಾರು ವರ್ಷದ ಹಿಂದಿನ ಅದೇ ತುಂಟನಗೆಯಾದರೂ ಹಳೆಯದೆನ್ನಿಸಲಿಲ್ಲ. ಅದೇನು ನನಗಿದ್ದ ವ್ಯಾಮೋಹವೋ ಇನ್ನೂ ಅವನ ಬಗ್ಗೆ ನನ್ನಲ್ಲಿ ಹುದುಗಿದ್ದ ಸೆಳೆತವೋ. ಅವನನ್ನು ಕುರಿತು ತಿಳಿದುಕೊಳ್ಳಬೇಕೆಂಬ ಕುತೂಹಲವಂತೂ ಕರಗಲಿಲ್ಲ. 'ಈಗಲೂ ನಿನ್ನನ್ನು ನೀನು ಹುಡುಗ ಅಂದ್ಕೊಂಡಿದ್ದಿಯೇನೋ?' ಛೇಡಿಸಿದೆ. 'ವೈನಾಟ್?' ಅಂದ ರುಸ್ತುಮ್.

'ಬಹಳ ವರ್ಷಗಳ ನಂತರ ಸಿಕ್ಕಿದ್ದೀನಿ. ಕಾಫಿಗೀಫಿ ಕುಡಿಸಲ್ವೇನೋ?' ಕೇಳಿದೆ.

'ಹಮ್... ಕುಡಿಸೋಣ. ಆಸ್ಪತ್ರೆ ಕ್ಯಾಂಟೀನಲ್ಲಿ ಬೇಡ. ಎದುರುಗಡೆ ಇರೋ ಕಾಫಿಹೌಸ್ ಇದೆಯಲ್ಲ... ಅಲ್ಲಿ ಆಗಬಹುದಾ' ಹುಬ್ಬುಕುಣಿಸಿದ. 'ಸರಿಯಪ್ಪ. ಗಾಡಿ ತೆಗಿತೀನಿ ತಡಿ' ಪಾರ್ಕಿಂಗ್ ಮಾಡಿದ್ದ ಗಾಡಿ ತೆಗೆಯಲು ಕಾರಿನ ಬಳಿ ಹೋದೆ. 'ಅಲ್ಲೆಲ್ಲೂ ಪಾರ್ಕಿಂಗ್ ಜಾಗ ಇಲ್ಲ ಕಣೆ. ಆಮೇಲೆ ತೆಗೀವಂತೆ ಬಾ' ಹೊರಟೇಬಿಟ್ಟ. ಅದೇ ಜೀನ್ಸ್ ಪ್ಯಾಂಟ್, ನೀಳ ಜುಬ್ಬ, ಕೆದರಿದ ಕೂದಲು, ಟ್ರಿಮ್ ಮಾಡಿದ ಗಡ್ಡ, ಹುರುಪಿನ ನಡಿಗೆ. ಅವನಿನ್ನೂ ಹುಡುಗನೇ ಅನ್ನಿಸಿ ಕಚಗುಳಿಯಿಟ್ಟ. ಕಾಫಿಹೌಸ್‌ಗೆ ಬಂದು ಕಾರ್ನರ್ ಟೇಬಲ್ ಹಿಡಿದೆವು. ಸಿಗರೇಟ್ ಹಚ್ಚಿದ್ದ. ಬಿರುಗಣ್ಣು ಬಿಡುತ್ತಾ ಕಿತ್ತುಕೊಳ್ಳಲು ಹೋದೆ. 'ಆಣೆ ಮಾಡಿದ್ದು ಮರೆತೆಯಾ?' ಕೋಪಿಸಿಕೊಂಡೆ. 'ಥುತ್. ನಿನಗಾಗಿ ಸಿಗರೇಟು, ಡ್ರಿಂಕ್ಸು ಎಲ್ಲಾ ಸತ್ಯವಾಗ್ಲೂ ಬಿಟ್ಟುಬಿಟ್ಟಿದ್ದೆ. ಅದು ನಿಂಗೂ ಗೊತ್ತು. ನೀನು ನನ್ನ ಬಿಟ್ಟು ಹೋಗತ್ಲು ಎಗೇನ್ ಅವೆಲ್ಲಾ ನನ್ನೊಳಗೆ ಎಂಟ್ರಿ ಕೊಟ್ಟುಬಿಟ್ವು... ಸಾರಿ ಕಣೆ' ಅಂದ. ಈಗ ಹಕ್ಕು ಚಲಾಯಿಸುವ ಸ್ಥಿತಿಯಲ್ಲಿ ನಾನೂ ಇರಲಿಲ್ಲ. ಆದರೂ ಅಭಿಮಾನ ಬಿಡಲಿಲ್ಲ. 'ಇವೆಲ್ಲಾ ಇಂಜ್ಯೂರಿಯಸ್ ಟು ಹೆಲ್ತ್